ಇದರ ಮಾಹಿತಿಯನ್ನು ತರಿಸಿಕೊಡುವ ಯೋಗ್ಯತೆ ಯಾವುದೇ ಸರ್ಕಾರಕ್ಕೂ ಇನ್ನೂ ಬಂದಿಲ್ಲ. ದಯವಿಟ್ಟು ನಿಮಗೆ ಏನಾದರು ಜವಾಬ್ದಾರಿ ಇದ್ದರೆ ಆ ಮಾಹಿತಿಯನ್ನು ಇದೇ ಅಧಿವೇಶನದಲ್ಲಿ ತರಿಸಿಕೊಡಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ —ನಾನು ಈಗ ಅಧಿಕಾರ ವಹಿಸಿಕೊಂಡಿದ್ದೇನೆ. ಈಗತಾನೇ ಬಿಸಿ ಬಿಸಿ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ನಾನು ಇಷ್ಟು ಭರವಸೆ ಕೊಡುತ್ತೇನೆ. ಈ ಅಧಿವೇಶನ ಮುಗಿಯುವುದರೊಳಗಾಗಿ.....

ಶ್ರೀ ಮಾಟಾಳ್ ನಾಗರಾಜ್.—ಸುದ್ದಿ ತಣ್ಣಗಾದ ಮೇಲೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ನಾವು ಯಾವಾಗಲೂ ತಣ್ಣಗೇ ಇರುತ್ತೇವೆ ಬಹಳ ಪ್ರಮುಖವಾದ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಉತ್ತರವನ್ನು ಈ ಅಧಿವೇಶನ ಮುಗಿಯುವುದರೊಳಗೆ ಕಳುಹಿಸಿಕೊಡಲು ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ಮಾಟಾಳ್ ನಾಗರಾಜ್.—ಅಷ್ಟರಲ್ಲಿ ನಿಮ್ಮ ಇಲಾಖೆ ಬದಲಾವಣೆಯಾದರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಹೋದ ಅಧಿವೇಶನದಲ್ಲಿ ಇವರು ನಮಗೆ ಬಹಳ ಭರವಸೆಗಳನ್ನು ಕೊಟ್ಟಿದ್ದರು. ಈಗ ಕೇಳೋಣ ಎಂದರೆ ಅವರಿಗೆ ಆ ಖಾತೆಯೇ ಇಲ್ಲ ಅದಕ್ಕೆ ನಮಗೆ ತೊಂದರೆ ಆಗಿದೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸರ್ಕಾರ ಇದೆಯಲ್ಲ :

ಅಧ್ಯಕ್ಷರು.—ಸರ್ಕಾರ ನಿಂತರವಾಗಿ ನಡೆಯುತಕ್ಕಂಥಾದ್ದು. ಅವರು ಕೊಟ್ಟ ಭರವಸೆಗಳಿಗೆ ಅವರು ಕೊರಳು ಕೊಡಬೇಕಾಗುತ್ತದೆ, ಮತ್ತೆ ಪ್ರೊ. ನಂಜುಂಡಸ್ವಾಮಿಯವರು ರೈಜ್ ಮಾಡಿರತಕ್ಕಂಥ ಪ್ರಶ್ನೆ ಏನೆಂದರೆ ಅಧಿಕಾರಿಗಳು ಖಾಸಗಿ ಕೆಲಸಗಳಿಗೆ ಸರ್ಕಾರಿ ವಾಹನಗಳನ್ನು ಒಳಸಿ ಕೊಂಡರೆ ಪೈನಾನ್ಷಿಯಲ್ ಕೋಡ್‌ನಲ್ಲಿ ಇರುವಂತೆ, ಅಷ್ಟು ಹಣವನ್ನು ಅವರು ಸರ್ಕಾರಕ್ಕೆ ಅಧಿಕಾರಿಗಳು ತುಂಬಿ ಕೊಡಬೇಕು ಎಂದು, ಆ ಮಾಹಿತಿ ಕಳೆದ ವರ್ಷ ಅಥವಾ ಅದರ ಹಿಂದಿನ ವರ್ಷ ಈ ರೀತಿ ಎಷ್ಟು ಜನ ಅಧಿಕಾರಿಗಳು ಎಷ್ಟು ಹಣ ಸರ್ಕಾರಕ್ಕೆ ತುಂಬಿಕೊಟ್ಟಿದ್ದಾರೆಂಬ ದಾಖಲೆಗಳು ನಿಮಗೆ ಸಿಗಬೇಕು.

SRI T. N. NARASIMHAMURTHY.—I have already promised. I will make honest efforts to see that the information is collected and place it on the table of the House.

ಅಧ್ಯಕ್ಷರು.—ಆಗಬಹುದು. ೪೯ (೨೩೫) ಸಂಖ್ಯೆಯ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ಆದ್ದರಿಂದ ಇದನ್ನು ಮುಂದಿನವಾರ ತೆಗೆದುಕೊಳ್ಳುತ್ತೇನೆ. ಈಗ ಶ್ರೀ ಕೆ. ಎಚ್. ಹನುಮೇಗೌಡರ ಪರವಾಗಿ ಅವರ ಪ್ರಶ್ನೆಯನ್ನು ಶ್ರೀ ಜಿ. ಎಸ್. ಆಚಾರ್‌ರವರು ಕೇಳಬಹುದು.

ಹಾಸನದಲ್ಲಿ ೨೦೦ ಹಾಸಿಗೆಯ ಆಸ್ಪತ್ರೆ ನಿರ್ಮಾಣದ ಬಗ್ಗೆ

೧೯೮. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಪಟ್ಟಣದ ಜಿಲ್ಲಾ ಆಸ್ಪತ್ರೆಯನ್ನು ಯಾವಾಗ ಮತ್ತು ಎಷ್ಟು ಜನ ರೋಗಿಗಳ ಅನುಕೂಲಕ್ಕಾಗಿ ಕಟ್ಟಲಾಯಿತು ?

ಆ) ಈ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಬರುವ ಬಡ ರೋಗಿಗಳಿಗೆ ಬೆಡ್‌ಗಳಿಲ್ಲದೆ ವರಾಂಡದಲ್ಲಿ ಮತ್ತು ವಾರ್ಡ್‌ಗಳ ಬೆಡ್‌ಗಳ ಮಧ್ಯದಲ್ಲೂ ಬೆಡ್‌ಗಳನ್ನು ಹಾಕಿ ರೋಗಿಗಳಿಗೆ ಅವಕಾಶ ಕಲ್ಪಿಸಬೇಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ರೀತಿ ದಿನೇ ದಿನೇ ಹೆಚ್ಚುತ್ತಿರುವ ಬಡರೋಗಿಗಳ ಅನುಕೂಲಕ್ಕಾಗಿ ೨೦೦ ಹಾಸಿಗೆಯ ಒಂದು ವಾರ್ಡನ್ನು ಕಟ್ಟಲು ಕಳೆದ ಹತ್ತು ವರ್ಷಗಳಿಂದ ಸರ್ಕಾರಕ್ಕೆ ಒತ್ತಾಯ ಬರುತ್ತಿರುವುದು ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ೧೦೦ ಹಾಸಿಗೆಗಳ ಒಂದು ಆಸ್ಪತ್ರೆಯನ್ನು ೧೯೭೯ರಲ್ಲಿ ಕಟ್ಟಲಾಯಿತು,

ಆ) ಹೌದು.

ಇ) ಹೌದು.

ಈ) ಹಣದ ಲಭ್ಯತೆಯನ್ನು ಅನುಸರಿಸಿ ಕ್ರಮಕೈಗೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ. ಹಾಸನದಲ್ಲಿ ೧೯೭೯ನೇ ಇಸವಿಯಲ್ಲಿ ೧೦೦ ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಕಟ್ಟಲಾಯಿತು. ಆಗಿನ ಪ್ರಜಾ ಸಂಖ್ಯೆ ೨೦ ಸಾವಿರ ಇತ್ತು. ಈಗ ಅದು ಒಂದು ಲಕ್ಷಕ್ಕೂ ಮೀರಿದೆ. ಮತ್ತು ರೋಗಿಗಳ ಸಂಖ್ಯೆಯೂ ಸಹ ಹೆಚ್ಚಾಗಿದೆ. ರೋಗಿಗಳು ಸ್ಥಳಾವಕಾಶ ಇಲ್ಲದೆ ಹೊರಾಂಡದಲ್ಲಿ ನೆಲದ ಮೇಲೆ ಮಲಗಿರುತ್ತಾರೆ. ರೋಗಿಗಳು ನೆಲದ ಮೇಲೆ ಕಾಯಿಲೆಯಿಂದ ನರಳುವಂತಹ ಪರಿಸ್ಥಿತಿ ಇದೆ. ಈ ಬಗ್ಗೆ ಅನೇಕ ವರ್ಷಗಳಿಂದ ಹೆಚ್ಚಿನ ಬೆಡ್‌ಗಳಿಗಾಗಿ ಒತ್ತಾಯ ಮಾಡಲಾಗುತ್ತಿದೆ. ಆದರೂ ಏನೂ ಕ್ರಮ ಕೈಗೊಂಡಿಲ್ಲ. ರೋಗಿಗಳಿಗೆ ಉಪಶಮನ ಮಾಡುವ ಬದಲು ಆ ಆಸ್ಪತ್ರೆ ರೋಗಗಳ ಉತ್ಪಾದನಾ ಘಟಕ ಆಗಲಿಕ್ಕೆ ಹತ್ತಿದೆ. ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ ಅಲ್ಲಿ ೨೦೦ ಹಾಸಿಗೆಗಳ ಆಸ್ಪತ್ರೆಯನ್ನು ಕಟ್ಟಲು ಹಿಂದೆ ಆಶ್ವಾಸನೆ ಕೊಟ್ಟಿದ್ದರು. ಇದನ್ನು ಅತ್ಯಂತ ತುರ್ತು ಸೇವೆ ಎಂದು ಪರಿಗಣಿಸಿ ಮಾಡಬೇಕು. ಹಣದ ಲಭ್ಯತೆಯನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳುವುದು ಮಾಮೂಲಿನ ಉತ್ತರ ಹಾಗಲ್ಲ. ಅತ್ಯಂತ ತುರ್ತು ಸೇವೆ ಎಂದು ಪರಿಗಣಿಸಿ ೧೯೯೦-೯೧ನೇ ಇಸವಿಯಲ್ಲಿಯೇ ಈ ಆಸ್ಪತ್ರೆಯ ವಾರ್ಡ್ ಕಟ್ಟಲಂ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಆಚಾರ್‌ರವರು ಬೈಂದೂರಿನವರು, ಆದರೆ ನಾನು ಹಾಸನದವರು. ಆದ್ದರಿಂದ ನನಗೆ ಅಲ್ಲಿನ ಪರಿಸ್ಥಿತಿ ಚೆನ್ನಾಗಿ ಗೊತ್ತು. ಆದರೆ ಹಣದ ಅಭಾವ ನಮಗೆ ಎಷ್ಟು ಇದೆ ಎನ್ನುವುದೂ ತಮಗೂ ಗೊತ್ತಿದೆ. ಆದ್ದರಿಂದ ಅಲ್ಲಿ ವಾರ್ಡ್ ಕಟ್ಟಲಿಕ್ಕೆ ಆಗಲಿಲ್ಲ. ಅಲ್ಲಿ ೨೦೦ ಹಾಸಿಗೆಗಳ ಒಂದು ವಾರ್ಡ್ ಕಟ್ಟಬೇಕೆಂದು ನೀಲಿ ನಕಾಶೆ ತಯಾರಾಗಿದೆ. ಅದನ್ನು ಕಟ್ಟುವುದಕ್ಕೂ ಏರ್ಪಾಡು ಮಾಡಿ ಆಗಿದೆ. ಆದೂ ಅಲ್ಲದೆ ಅಲ್ಲಿ ೨೦ ಹಾಸಿಗೆಗಳ ಒಂದು ಮಕ್ಕಳ ವಾರ್ಡ್ ಸಹ ಹೊಸದಾಗಿ ಕಟ್ಟಬೇಕೆನ್ನುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಅವಶ್ಯ ಬಿದ್ದಾಗ ಹಣ ಒದಗಿಸಲು ಕ್ರಮಕೈಗೊಳ್ಳಲಾಗುವುದು.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯ ಬಗ್ಗೆ

೧೩೫. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ಒಂದು ದಶಕದಿಂದೀಚೆಗೆ ಹೊರಡಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅದಕ್ಕೆ ಯಾರು ಜವಾಬ್ದಾರರು ?

(ಆ) ಜೇಷ್ಠತಾ ಪಟ್ಟಿ ಇಲ್ಲದೆ ಕೆಲವು ಪ್ರಾಧ್ಯಾಪಕರಿಗೆ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿದೆಯೇ ?

(ಇ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಅವರಿಗೆ ಬಡ್ತಿ ನೀಡಲಾಗಿದೆ ?

(ಈ) ಸರ್ಕಾರದ ಜೇಷ್ಠತಾಪಟ್ಟಿಯನ್ನು ಹೊರಡಿಸಿ ಈಗಾಗಲೇ ನಿವೃತ್ತಿ ಹೊಂದಿದವರಿಗೆ ಜೇಷ್ಠತಾ ಆಧಾರದ ಮೇಲೆ ವೇತನ ಸಿಗುವಂತಲ್ಲದೆ ಅವನು ಪಡೆಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀಮತಿ ಕೆ. ಎಸ್, ನಾಗರತ್ನಮ್ಮ (ಆರೋಗ್ಯ ಸಚಿವರು).—

(ಅ) ಪ್ರಾಧ್ಯಾಪಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ ೩೧-೮-೯೭ ರಂದು ಹೊರಡಿಸಲಾಗಿದೆ ಹಾಗೂ ಹಲವು ಆಕ್ಷೇಪಣೆಗಳು ಬಂದಿವೆ.

(ಆ) ತಾತ್ಕಾಲಿಕ ಜೇಷ್ಠತಾಪಟ್ಟಿಯ ಆಧಾರದ ಮೇಲೆ ನೀಡಲಾಗಿದೆ.

(ಇ) ಹೌದು.